


ಹೋಯಿತು ಎಂದು ಚಿಂತಿಸುತ್ತಾ ಮತ್ತೆ ಅಂಗಡಿಗೆ ಬಂದ. "ಅಲ್ಲಾ... ಈ ಗೊನೆ ಇನ್ನು ಎಸೆಯೋದೇ ಸೈ ಅಂದ್ಯಲ್ಲ ಗೋವಿಂದಣ್ಣ, ಹಂಗಿದ್ರೆ ನಾನು ಎರಡು ಹಣ್ಣು ಅದ್ರಲ್ಲಿ ತಿನ್ಲಾ..." ಎಂದು ಬೀರ ಕೇಳಿದಾಗ, ಗೋವಿಂದ, "ಮೊದ್ಲು ಮಗ ಕದ್ದಿದ್ದರ ದುಡ್ಡು ಕೊಡು, ಬಾಳೆಹಣ್ಣು ತಿಪ್ಪೇಗೆಸೀತೀನಿ, ನಿಂಗೆ ಕೊಡಲ್ಲ" ಅಂತ ಕೂಗಿದ. ಇಷ್ಟು ಕೊಳೆತ ಗೊನೆಯಲ್ಲಿ ಎರಡು ಬಾಳೆಹಣ್ಣು ಹೋದರೆ ಈ ಗೋವಿಂದನಿಗೇನು ನಷ್ಟ ಎಂದು ಯೋಚಿಸುತ್ತಾ ಬೀರ, "ಮತ್ತೇನಿಲ್ಲ. ಈರಿ ತಿಂಡೀನು ಮಾಡ್ದೆ ಎಲ್ಲಿ ಹೋದ್ಲೋ" ಅಂದ. "ಅವಳು ಗೌಡ್ರ ಮನೇಕಡೆ ಹೋದ್ಲಲ್ಲ" ಎಂದು ಗೋವಿಂದ ಹೇಳಿದಾಗ ಬೀರನೂ ಆ ದಾರಿ ಹಿಡಿದ.

★★★

ಹೆನ್ನೂರಿನ ಕಮ್ಲಿ ಗೌಡರಿಗೆ ಕಾಣದಂತೆ ಮನೆಯ ಪಕ್ಕದ ಓಣಿಯಲ್ಲಿ ನಿಧಾನ ದಾಟಿ, ಮನೆಯ ಹಿಂದೆ ಬಂದು ಅಮ್ಮಾರೆ... ಅಮ್ಮಾರೆ ಎಂದು ಸಣ್ಣ ದನಿಯಲ್ಲಿ ಕೂಗಿದ್ದನ್ನು ಕೇಳಿದ ಗೌಡತಿ ಯಾರು? ಕಮ್ಲೀನಾ? ಏನೇ ಈ ಹೊತ್ತಲ್ಲಿ ಎಂದು ವಿಚಾರಿಸುತ್ತಾ ಹೊರಗೆ ಬಂದರು. ಹುಶ್... ಮೆಲ್ಲಗೆ ಮಾತಾಡಿ... ಎಂದು ಗೌಡತಿಯನ್ನು ಎಚ್ಚರಿಸಿ, ನಿಮ್ಮ ಕಿವಿಗೆ ನಾನು ಕೇಳಿದ ಒಂದು ಸುದ್ದಿ ಹಾಕೋಣ ಅಂತ ಬಂದೆ ಎಂದು ಕಮ್ಲಿ ಸಣ್ಣ ದನಿಯಲ್ಲಿ ಹೇಳಿದಳು. "ಎಂಥಾ ಗುಟ್ಟೇ?" ಕುತೂಹಲದಿಂದ ಗೌಡತಿ ವಿಚಾರಿಸಿದರು. "ನಮ್ಮನೇರು ಹೇಳಿದ್ದು... ಹೌದೋ ಅಲ್ವೋ ಗೊತ್ತಿಲ್ಲ... ಆದ್ರೂ... ನಿನ್ನೆ ನಮ್ಮನೇರು ಚಿನ್ನೂರಲ್ಲಿ ಸೋಮಣ್ಣನ ಅಂಗಡೀಲಿ ಕೂತಿದ್ದಾಗ ಬೀರ ಬಂದು ರೊಕ್ಕದ ರಾಶೀನೇ ತೆಗದ್ನಂತೆ. ಸೋಮಣ್ಣ ಎಲ್ಲಿತ್ತೋ ಇಷ್ಟು ರೊಕ್ಕ ಅಂತ ಕೇಳಿದ್ದಕ್ಕೆ ಈರಿಗೆ ಗೌಡ್ರು ಕೊಟ್ಟಿದ್ದು ಅಂದ್ನಂತೆ. ಅಲ್ಲಾ... ಗೌಡ್ರು ಈರಿಗ್ಯಾಕೆ ಅಷ್ಟು ದುಡ್ಡು ಕೊಡ್ತಾರೆ? ಆದ್ರೂ ನಿಮಗೆ ಇದು ತಿಳ್ಸೋಣ ಅಂತಾನೆ